Reg. No. | | | | | | | | | | | | |

# BASKALN 401/BSWKALN 401/HRDKALN 401/ BVAKALN 401

**Fourth Semester B.A./B.S.W./B.A. (HRD)/B.V.A. Examination, July/August 2023**
**(NEP 2020) (2022 – 23 Batch Onwards)**
**KANNADA LANGUAGE – II (AECC)**

ಸಮಯ : 2 ಗಂಟೆಗಳು ಗರಿಷ್ಠಾಂಕಗಳು : 60

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ದುಶ್ಶಾಸನನು ದ್ರೌಪದಿಯನ್ನು ಸಭೆಗೆ ಎಳೆದು ತರುವ ಸಂದರ್ಭ ಹಾಗೂ ಆಗ ಪಾಂಡವರ ಪ್ರತಿಕ್ರಿಯೆಯ ಕುರಿತು ವಿವರಿಸಿರಿ.

**ಅಥವಾ**

ಸರ್ವಜ್ಞನ ಲೋಕನೀತಿಯನ್ನು 'ಜಾತಿವಿಜಾತಿಯೆನಬೇಡ' ತ್ರಿಪದಿಗಳ ಹಿನ್ನೆಲೆಯಲ್ಲಿ ವಿವರಿಸಿರಿ.

2) ಕನ್ನಡ ಸಾಹಿತ್ಯ ಲೋಕಕ್ಕೆ ಕೊಳಂಬೆ ಪುಟ್ಟಣ್ಣ ಗೌಡರು ನೀಡಿದ ಕೊಡುಗೆಯನ್ನು ವಿವರಿಸಿರಿ.

**ಅಥವಾ**

ಗೊಣಗಾಟ ಎನ್ನುವುದು ಪ್ರತಿಯೊಬ್ಬರಲ್ಲಿಯೂ ಇರುತ್ತದೆ ಎಂಬ ವಿಚಾರವನ್ನು ಲೇಖನದ ಹಿನ್ನೆಲೆಯಲ್ಲಿ ವಿವೇಚಿಸಿರಿ.

3) ಬಾಲ್ಯ ವಿವಾಹದ ಕಹಿ ಅನುಭವವನ್ನು ಗಾಂಧೀಜಿಯವರು ತಮ್ಮ ಆತ್ಮಕತೆಯಲ್ಲಿ ನಿರೂಪಿಸಿದ ಬಗೆಯನ್ನು ವಿವರಿಸಿರಿ.

**ಅಥವಾ**

ಕಳ್ಳತನ ಮತ್ತು ಪ್ರಾಯಶ್ಚಿತ್ತದ ಕ್ಷಣಗಳನ್ನು ಗಾಂಧೀಜಿಯವರು ಅನುಭವಿಸಿದ ರೀತಿಯನ್ನು ವಿವರಿಸಿರಿ.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. **(3×5=15)**

1) ಧರ್ಮವು ಸಿದ್ಧಯ್ಯನಿಗೆ ಮುಳುವಾದ ಬಗೆಯು 'ಕತ್ತೆ ಮತ್ತು ಧರ್ಮ' ಕವಿತೆಯಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿರಿ.

**ಅಥವಾ**

'ಮೊಂಬತ್ತಿ ಉರಿಸಿ ಕಾಯುತ್ತಿದ್ದೇವೆ' ಕವನದಲ್ಲಿ ಸ್ತ್ರೀಪರವಾದ ಕಾಳಜಿಯು ಹೇಗೆ ಅಭಿವ್ಯಕ್ತಗೊಂಡಿದೆ ? ವಿವರಿಸಿರಿ.

ಪು.ತಿ.ನೋ.

2) ಪ್ರಕೃತಿಯ ನಿಯಮಗಳನ್ನು ಮನುಷ್ಯರು ಮುರಿಯುತ್ತಿದ್ದಾರೆ ಎಂಬ ವಿಚಾರವನ್ನು 'ನಾವು ಮತ್ತು ನಮ್ಮ ಪ್ರಕೃತಿ' ಲೇಖನದ ಹಿನ್ನೆಲೆಯಲ್ಲಿ ವಿವೇಚಿಸಿರಿ.

**ಅಥವಾ**

ಬದುಕಿನ ಸಂಕೀರ್ಣ ಅನುಭವವನ್ನು 'ಜೀವದಲಿ ಜಾತ್ರೆ ಮುಗಿದಂತೆ' ಕಥೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿರಿ.

3) ಗಾಂಧೀಜಿಯವರು ಎದುರಿಸಿದ ಎರಡು ದುಃಖದ ಪ್ರಸಂಗಗಳನ್ನು ವಿವರಿಸಿರಿ.

**ಅಥವಾ**

ಗಾಂಧೀಜಿಯವರ ಧಾರ್ಮಿಕ ವಿಚಾರಗಳ ಕುರಿತಾದ ಭಾವನೆಗಳು 'ಧರ್ಮದ ಬೆಳಕು' ಭಾಗದಲ್ಲಿ ಹೇಗೆ ವ್ಯಕ್ತಗೊಂಡಿದೆ ? ವಿವರಿಸಿರಿ.

III. ಕೆಳಗಿನ **ಒಂದು** ಪದ್ಯಭಾಗದ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. **(1×5=5)**

1) ಅಹಹ ಪಾಂಡವರಾಯಪಟ್ಟದ
ಮಹಿಳೆಗಿದು ವಿಧಿಯೇ ಮಹಾಕ್ರತು
ವಿಹಿತಮಂತ್ರಜಲಾಭಿಷಿಕ್ತಕಚಾಗ್ರೆಗಿದು ವಿಧಿಯೆ ।
ಮಿಹಿರಬಿಂಬವ ಕಾಣದಾನೃಪ
ಮಹಿಳೆಗಿದು ವಿಧಿಯೇ ವಿಧಾತ್ರನ
ಕುಹಕವೈ ಸಲೆ ಶಿವ ಶಿವಾಯೆಂದರು ಸಭಾಸದರು

2) ಮಣ್ಣ ಕುಡಿಕೆಯು ಒಡೆದು ಮಣ್ಣ ಸೇರುವ ತೆರದಿ
ನನ್ನ ಅಹಂಕಾರವನೇ ನಾನೊಡೆಯಬೇಕು
ಮೃಣ್ಮಯವು ಈ ಕಾಯ ಮೆಣ್ಣೊಡಲ ಸೇರುತಲಿ
ಚಿನ್ಮಯನ ಶ್ರೀಪಾದ ನಾ ಸೇರಬೇಕು

IV. ಕೆಳಗಿನವುಗಳಲ್ಲಿ **ಎರಡರ** ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. **(2×4=8)**

1) ಯಾತರದು ಹೂವೇನು ನಾತರದು ಸಾಲದೇ

2) ಗಂಡುಳ್ಳ ಬಾಲ್ಯಾರು ಭಿಕ್ಷಾಕ ಹೋದರು

3) ಇಸ್ತ್ರಿಯ ಗೆರೆಗಳು ಮಾಯುತ್ತವೋ ಎಂದುಕೊಂಡೆ ಹಾಕಿ ಹೊರಟಿದ್ದ

4) ಹುಡುಕುತ ನಿಂತವ್ನೆ ಹೂತ ಜಾಗ.

V. ಕೆಳಗಿನ ಪ್ರಶ್ನೆಗಳಿಗೆ ವಾಕ್ಯರೂಪದಲ್ಲಿ ಉತ್ತರಿಸಿರಿ. **(8×1=8)**

1) ಕುಮಾರವ್ಯಾಸನ ಹುಟ್ಟೂರು ಯಾವುದು ?

2) 'ಪೆಂಟಯ್ಯನ ಅಂಗಿ' ಕವನದ ಕರ್ತೃ ಯಾರು ?

3) ಸಿದ್ಧಲಿಂಗಯ್ಯ ಅವರ ಆತ್ಮಕಥನದ ಹೆಸರೇನು ?

4) ಕೊಳಂಬೆ ಪುಟ್ಟಣ್ಣ ಗೌಡರನ್ನು 'ಅಭಿನವ ಆಂಡಯ್ಯ' ಎಂದು ಕೊಂಡಾಡಿದವರು ಯಾರು ?

5) ಎ.ಎನ್. ಮೂರ್ತಿರಾಯರ ಪೂರ್ಣ ಹೆಸರೇನು ?

6) ಮಹಾಚಲಯ್ಯನ ಪತ್ನಿಯ ಹೆಸರೇನು ?

7) ಗಾಂಧೀಜಿಯವರ ತಾಯಿಯ ಹೆಸರೇನು ?

8) ಗಾಂಧೀಜಿಯವರು ಯಾವ ಪದವಿಯನ್ನು ಪಡೆಯಲು ವಿಲಾಯಿತಿಗೆ ಹೋಗುವ ಯೋಚನೆ ಮಾಡಿದರು ?

---